# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 29.12.2023 ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2023 ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಡವಳಿಗಳು**

**<u>ಉಪಸ್ಥಿತರು</u>**

| | | | |
|---|---|---|---|
| 1. | ಪ್ರೊ. ಜಯರಾಜ್ ಅಮೀನ್<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ರಾಮೇಗೌಡ ಎಂ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | ಆನ್‌ಲೈನ್ ಮೂಲಕ ಹಾಜರಾತಿ |
| 3. | ಪ್ರೊ. ಎಂ. ಜಯಶಂಕರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | |
| 4. | ಡಾ. ಎಸ್.ಬಿ.ಎಂ. ಪ್ರಸನ್ನ | ಸದಸ್ಯರು | |
| 5. | ಡಾ. ಕೆ. ಸಿ. ಮಹದೇಶ | ಸದಸ್ಯರು | |
| 6. | ಶ್ರೀ ಕೃಷ್ಣಪ್ರಸಾದ್ ಕೆ.ಎನ್. | ಸದಸ್ಯರು | |
| 7. | ಡಾ. ರಾಜೇಂದ್ರ ಎಸ್. ನಾಯಕ್ | ಸದಸ್ಯರು | |
| 8. | ಶ್ರೀ ಫಾದರ್ ಮೈಕಲ್ ಸಂತುಮಯೋರ್ | ಸದಸ್ಯರು | |
| 9. | ಶ್ರೀಮತಿ ಸಮೀರ ಕೆ. ಎ. | ಸದಸ್ಯರು | |
| 10. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು,<br>ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | ಆನ್‌ಲೈನ್ ಮೂಲಕ ಹಾಜರಾತಿ |
| 11. | ಪ್ರೊ. ರಾಜುಕೃಷ್ಣ ಚಲಣ್ಣವರ್<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 12. | ಪ್ರೊ. ವೈ. ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 13. | ಶ್ರೀ ರಾಜು ಕೆ., ಕೆ.ಎ.ಎಸ್<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

## ಪ್ರಾರಂಭಿಕ

**ಪ್ರಾರಂಭದಲ್ಲಿ ಕುಲಸಚಿವರು, ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

- **ಸ್ವಾಗತ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ದ ಪ್ರಕರಣ 28 (1)(ಡಿ) ಯ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಡೀನರ ನೆಲೆಯಲ್ಲಿ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸದಸ್ಯರಾಗಿ ನಾಮ ನಿರ್ದೇಶನಗೊಂಡಿರುವ ಪ್ರೊ.ಎಂ.ಜಯಶಂಕರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಹಿರಿಯ ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರನ್ನು ಕುಲಸಚಿವರು ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು.

**I ನಡವಳಿಗಳ ದೃಢೀಕರಣ**

ದಿನಾಂಕ 29.11.2023 ರಂದು ನಡೆದ ಸಿಂಡಿಕೇಟಿನ 2023 ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ

**ತಿದ್ದುಪಡಿ:** ದಿನಾಂಕ 29.11.2023 ರಂದು ನಡೆದ ಸಿಂಡಿಕೇಟಿನ 2023 ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ಇತರ ವಿಷಯದ ಆರನೇ ಪಾರಾಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆಗೊಳ್ಳುವವರೆಗೆ ಸಿಂಡಿಕೇಟು ಸಭೆಗೆ ಹಾಜರಾಗುವ ಅಧಿಕಾರೇತರ ಸಿಂಡಿಕೇಟು ಸದಸ್ಯರುಗಳ ಈಗಿನ ಪ್ರಯಾಣ ಭತ್ಯೆ ದರವನ್ನು ರೂ. 12.00 ರಿಂದ ರೂ. 16.00ಕ್ಕೆ ಹೆಚ್ಚಿಸುವುದು. ಆಡಿಟ್ ಆಕ್ಷೇಪಣೆಗೆ ಒಳಪಟ್ಟಲ್ಲಿ ಆಡಿಟ್ ಆಕ್ಷೇಪಣೆಗೆ ಅನುಸಾರವಾಗಿ ಕ್ರಮಕೈಗೊಳ್ಳಲು ಹಾಗೂ ರೂ 16.00 ರ ದರದಲ್ಲಿ ಪಾವತಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಉಳಿದಂತೆ ದಿನಾಂಕ 29.11.2023 ರಂದು ನಡೆದ ಸಿಂಡಿಕೇಟಿನ 2023 ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.

II ಅನುಸರಣಾ ವರದಿಯ ಅನುಮೋದನೆ

ದಿನಾಂಕ 12.10.2023 ರಂದು ನಡೆದ ಸಿಂಡಿಕೇಟಿನ 2023 ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮಗಳ ಅನುಸರಣಾ ವರದಿಯ ಅನುಮೋದನೆ

ಅನುಮೋದಿಸಲಾಯಿತು.

III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ: ಸಾ.ಸ.8:1 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ 42ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಬಗ್ಗೆ. |
| ನಿರ್ಣಯ : | ಮಂಗಳೂರು ವಿಶ್ವವಿದ್ಯಾನಿಲಯದ 42ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಬಗ್ಗೆ 2024 ರ ಜನವರಿ 15ರೊಳಗೆ ವಿಶೇಷ ಸಿಂಡಿಕೇಟು ಸಭೆ ಕರೆದು ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಡಿಸಿ: ಸಾ.ಸ.8:2 (2023) |
| ವಿಷಯ: | ಶೈ.ವ. 2024-25 ನೇ ಸಾಲಿಗೆ ಸಂಯೋಜನಾ ಶುಲ್ಕ ನಿಗದಿಪಡಿಸುವ ಬಗ್ಗೆ |
| ನಿರ್ಣಯ : | ಶೈಕ್ಷಣಿಕ ವರ್ಷ 2023-24 ನೇ ಸಾಲಿಗೆ ನಿಗದಿಪಡಿಸಲಾದ ಶುಲ್ಕಗಳಿಗೆ ಶೇಕಡ 10% ರಷ್ಟು ಹೆಚ್ಚಿಸಿ. ಶೈಕ್ಷಣಿಕ ವರ್ಷ 2024-25 ನೇ ಸಾಲಿಗೆ ಶುಲ್ಕಗಳನ್ನು ನಿಗದಿಪಡಿಸುವ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ: ಸಾ.ಸ. 8:3 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Yenepoya Dental College, Yenepoya (Deemed to be) University, Deralakatte ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ |
| ನಿರ್ಣಯ : | ಒಡಂಬಡಿಕೆಯ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ: ಸಾ.ಸ.8:4 (2023) |
| ವಿಷಯ: | ಜುಲೈ/ಅಗಸ್ಟ್ 2023 ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ. |
| ನಿರ್ಣಯ : | ತನಿಖಾ ವರದಿಯನ್ನು ಅನುಮೋದಿಸಲಾಗಿದೆ. ಇನ್ನು ಮುಂದೆ ವಿಶ್ವವಿದ್ಯಾನಿಲಯ ನಡೆಸುವ ಎಲ್ಲಾ ಹಂತದ ಪರೀಕ್ಷಾ ಕಾರ್ಯಗಳಲ್ಲಿ, ಕೊಠಡಿ ಮೇಲ್ವಿಚಾರಣೆ, ಮೌಲ್ಯಮಾಪನ, ಜಾಗೃತದಳದ ಜವಾಬ್ದಾರಿ ಇತ್ಯಾದಿಗಳನ್ನು ಯುಜಿಸಿ ವೇತನ ಪಡೆಯುತ್ತಿರುವ ಎಲ್ಲಾ ಅಧ್ಯಾಪಕರುಗಳು ಕಡ್ಡಾಯವಾಗಿ ಮಾಡತಕ್ಕದ್ದು. ಈ ಕಾರ್ಯದಲ್ಲಿ ಜಂಟಿ ನಿರ್ದೇಶಕರ ಬೆಂಬಲವನ್ನು ಕೂಡಾ ಪಡೆಯುವುದು. ಸ್ವಾಯತ್ತ ಕಾಲೇಜುಗಳಿಂದ ಕೂಡಾ ಶೇಕಡ 50%ರಷ್ಟು ಮೌಲ್ಯಮಾಪಕರನ್ನು ಮೌಲ್ಯಮಾಪನ ಕಾರ್ಯಕ್ಕಾಗಿ ನಿಯೋಜಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ: ಸಾ.ಸ.8:5 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಪದವಿ ಕಾರ್ಯಕ್ರಮಗಳ ಅಧ್ಯಾಪಕರ 2023-24 ನೇ ಸಾಲಿನ ಜೇಷ್ಠತಾ ಪಟ್ಟಿ ಅನುಮೋದನೆ ಬಗ್ಗೆ. |
| ನಿರ್ಣಯ : | ಸರ್ವಾನುಮತದಿಂದ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ: ಸಾ.ಸ.8:6 (2023) |
| ವಿಷಯ: | ಶ್ರೀಮತಿ ಗೀತಾ ಕೆ., ಶೀಘ್ರಲಿಪಿಗಾರರು, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರ ಹುದ್ದೆಗೆ ನಿಯೋಜಿಸುವ ಬಗ್ಗೆ. |
| ನಿರ್ಣಯ : | ಶ್ರೀಮತಿ ಗೀತಾ ಕೆ., ಶೀಘ್ರಲಿಪಿಗಾರರು ಇವರು 2024 ರ ಜನವರಿಯಿಂದ ಮಾತೃ ಸಂಸ್ಥೆಯಾದ ಮಂಗಳೂರು ವಿಶ್ವವಿದ್ಯಾನಿಲಯದ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸುವ ಬಗ್ಗೆ ಸರಕಾರಕ್ಕೆ ಪತ್ರ ಬರೆಯಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ.8:7 (2023)

ವಿಷಯ: ಡಾ. ಐರಾನಿ ಮೊಹಮ್ಮದ್ ಖಾನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ವಿಭಾಗ, ಇವರಿಗೆ ಯುಜಿಸಿ ನಿಯಮಾವಳಿ 2018 ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ಪದೋನ್ನತಿ- ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ : ಸರ್ವಾನುಮತದಿಂದ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ.8:8 (2023)

ವಿಷಯ: ಡಾ. ಗೋವಿಂದರಾಜು ಬಿ.ಎಂ., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗ, ಇವರಿಗೆ ಯುಜಿಸಿ ನಿಯಮಾವಳಿ 2018 ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಸಹಪ್ರಾಧ್ಯಾಪಕ ಪದೋನ್ನತಿ ನೀಡುವುದಕ್ಕೆ ಸಂಬಂಧಿಸಿದ ಆಯ್ಕೆ ಸಮಿತಿಯ ಶಿಫಾರಸ್ಸನ್ನು ಅನುಮೋದಿಸುವ ಬಗ್ಗೆ

ನಿರ್ಣಯ : ಸರ್ವಾನುಮತದಿಂದ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ಸಾ.ಸ.8:9 (2023)

ವಿಷಯ: ಶ್ರೀಮತಿ ನಾಗವೇಣಿ ಪಿ., ನಿವೃತ್ತ ಉಪ ಕುಲಸಚಿವರು, ಕುಲಸಚಿವರ ಕಛೇರಿ ಇವರ ಪಿಂಚಣಿ ಸೌಲಭ್ಯಗಳ ಕುರಿತು.

ನಿರ್ಣಯ : ಶೇಕಡ 80%ರಷ್ಟು ತಾತ್ಕಾಲಿಕ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡಲು ಹಾಗೂ ಆಡಿಟ್ ಆಕ್ಷೇಪಣೆ ತೀರುವಳಿಗೊಂಡ ನಂತರ ಉಳಿಕೆ ಪಿಂಚಣಿ ಸೌಲಭ್ಯವನ್ನು ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹಣಕಾಸು ವಿಭಾಗ: ಸಾ.ಸ.8:10 (2023)

ವಿಷಯ: 2022-23 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ

ನಿರ್ಣಯ : ಸರ್ವಾನುಮತದಿಂದ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು: ಸಾ.ಸ.8:11 (2023)

ವಿಷಯ: ಡಾ. ಕೆ.ಸಿ.ಮಹದೇಶ ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

ನಿರ್ಣಯ :

1. ಅತಿಥಿ ಉಪನ್ಯಾಸಕರ ನೇಮಕಾತಿ ಮತ್ತು ಅವರ ಸಮಸ್ಯೆಗಳ ಹಾಗೂ ತಾತ್ಕಾಲಿಕ ಗುತ್ತಿಗೆ ನೌಕರರ ವಿಚಾರಗಳ ಕುರಿತು ಚರ್ಚಿಸಲು ಕೋರಿದೆ:

<u>ತಾತ್ಕಾಲಿಕ ಮತ್ತು ಹೊರಗುತ್ತಿಗೆ ನೌಕರರ (ಬೋಧಕೇತರ ಸಿಬ್ಬಂದಿಗಳ) ವಿಚಾರಗಳ ಕುರಿತು:</u>

ಮಂಗಳೂರು ವಿಶ್ವವಿದ್ಯಾನಿಲಯದಿಂದ ಕೊಡಗು ವಿಶ್ವವಿದ್ಯಾನಿಲಯ ವಿಭಜನೆಗೊಂಡ ಸಮಯದಲ್ಲಿ ಕೊಡಗು ವಿಶ್ವವಿದ್ಯಾನಿಲಯಕ್ಕೆ ಸೇರಿದ ಬೋಧಕೇತರ ಸಿಬ್ಬಂದಿಗಳ ಸಂಖ್ಯೆ 108 ಆಗಿರುತ್ತದೆ. ಈ 108ರಲ್ಲಿ ತಾತ್ಕಾಲಿಕ ಸಿಬ್ಬಂದಿ ಸಂಖ್ಯೆ 54 ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆ 54 ಆಗಿರುತ್ತದೆ. ಉಳಿದ ಸಿಬ್ಬಂದಿ ಹಾಗೂ ಕೊಡಗು ವಿಶ್ವವಿದ್ಯಾನಿಲಯಕ್ಕೆ ನೀಡಬೇಕಾದ ಭಾಗಶಃ ವೇತನದ ಬಗ್ಗೆ ಮಾಹಿತಿಯನ್ನು ಕೊಡಗು ವಿಶ್ವವಿದ್ಯಾನಿಲಯವು ನೀಡಿದ ತಕ್ಷಣವೇ ಸಿಂಡಿಕೇಟಿನ ಗಮನಕ್ಕೆ ತರಲು ನಿರ್ಣಯಿಸಲಾಯಿತು.

<u>ಅತಿಥಿ ಉಪನ್ಯಾಸಕರ ನೇಮಕಾತಿ ಮತ್ತು ಅವರ ಸಮಸ್ಯೆಗಳು:</u>

ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಯುಜಿಸಿ ನಿಯಮಾವಳಿ ಅನುಸಾರವಾಗಿ ಈ ಹಿಂದಿನಿಂದಲೂ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾಡಲಾಗುತ್ತಿದ್ದು ಸಿಂಡಿಕೇಟು ಸಭೆಯಲ್ಲಿ ಅನುಮೋದನೆಯನ್ನು ಪಡೆಯುವ ನಿಯಮವಿರುವುದಿಲ್ಲ.

2. ಮಂಗಳೂರು ವಿಶ್ವವಿದ್ಯಾನಿಲಯದ Naac ಮಾನ್ಯತೆಯ ಬಗ್ಗೆ ಚರ್ಚಿಸಿ ಅದರ ಉನ್ನತೀಕರಣದ ಬಗ್ಗೆ ಕ್ರಮವಹಿಸುವ ವಿಚಾರಗಳ ಬಗ್ಗೆ ಚರ್ಚಿಸಲು ಕೋರಿದೆ.

NAACಗೆ ಸಂಬಂಧಿಸಿದಂತೆ ಪ್ರತಿ ಸಿಂಡಿಕೇಟು ಸಭೆಗೆ IQAC ಪ್ರಗತಿ ಪರಿಶೀಲನಾ ವರದಿಯನ್ನು ಮಂಡಿಸುವುದು ಹಾಗೂ ಅದರ ಬಗ್ಗೆ ವಿಸ್ತೃತ ಚರ್ಚೆಯನ್ನು ನಡೆಸಿ ಸೂಕ್ತ ನಿರ್ದೇಶನಗಳನ್ನು ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

3. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಮತ್ತು ಶೈಕ್ಷಣಿಕ ಸ್ಥಾನಗಳನ್ನು ನೀಡುವ ಬಗ್ಗೆ ಚರ್ಚಿಸಲು ಕೋರಿದೆ.

ಘಟಕ ಕಾಲೇಜುಗಳ ಪ್ರಾಂಶುಪಾಲರ ಹುದ್ದೆ ಮಂಜೂರಾತಿ ಇದ್ದಂತಹ ಕಾಲೇಜುಗಳಲ್ಲಿ ಪ್ರಾಂಶುಪಾಲರನ್ನು ನೇಮಕಾತಿ ಮಾಡುವಾಗ ಎರಡು ವರ್ಷಗಳ ಅವಧಿಗೆ ಸೀಮಿತಗೊಳಿಸಿ ಅವರ ಸೇವಾ ಹಿರಿತನದ ಆಧಾರದ ಮೇಲೆ ನೇಮಕ ಮಾಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

4. ವಿಶ್ವವಿದ್ಯಾನಿಲಯದ ನೂತನ ಅಧಿಕಾರಿಗಳನ್ನು ನೇಮಿಸುವ ಪ್ರಕ್ರಿಯೆಗಳ ಕಾನೂನು ನಿಯಮಗಳ ಬಗ್ಗೆ ಮಾಹಿತಿ ಮತ್ತು ಚರ್ಚಿಸಲು ಕೋರಿದೆ.

ಎಲ್ಲಾ ಅಧಿಕಾರಿಗಳನ್ನು ನೇಮಕ ಮಾಡುವಾಗ ಸರಕಾರದ ಆದೇಶ ಹಾಗೂ ನಿಯಮಾವಳಿಗೆ ಅನುಸಾರವಾಗಿ ನೇಮಕ ಮಾಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ: ಸಾ.ಸ.8:12 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ NAAC ಮೌಲ್ಯಾಂಕಕ್ಕೆ ಮರು ಅರ್ಜಿ ಸಲ್ಲಿಸುವ ಬಗ್ಗೆ |
| ನಿರ್ಣಯ : | NAAC ಮೌಲ್ಯಾಂಕಕ್ಕೆ 2025/2026 ರಲ್ಲಿ ಅರ್ಜಿ ಸಲ್ಲಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. |

**ಇತರ ವಿಷಯಗಳು:**

1. ತಾತ್ಕಾಲಿಕ ನೆಲೆಯ ಸಿಬ್ಬಂದಿಗಳನ್ನು ಮುಂದಿನ ಮೂರು ತಿಂಗಳ ಅವಧಿಗೆ ಪ್ರಸ್ತುತ ಪಾವತಿಸುತ್ತಿರುವ ವೇತನದಂತೆ ಮುಂದುವರೆಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

2. ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳಿಗೆ ಕೆಸಿಎಸ್ ನಿಯಮ 32 ರಂತೆ ಸ್ವತಂತ್ರ ಪ್ರಭಾರ ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

3. ವಿಶ್ವವಿದ್ಯಾನಿಲಯದ ಜಮೀನಿಗೆ ಸಂಬಂಧಿಸಿದಂತೆ ಸಹಾಯಕ ನಿರ್ದೇಶಕರು, ಭೂಮಾಪನ ಇಲಾಖೆ, ಉಳ್ಳಾಲ ತಾಲೂಕು ಇವರಿಂದ ಸರ್ವೆ ಕಾರ್ಯ ನಡೆಸಿ ಗಡಿ ಗುರುತು ಮಾಡಲು ತಗಲುವ ವೆಚ್ಚವನ್ನು ವಿಶ್ವವಿದ್ಯಾನಿಲಯದಿಂದ ಭರಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

4. ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 8(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ, ಮೈಸೂರು ವಿಭಾಗ, ಮೈಸೂರು ಇವರು ದಿನಾಂಕ 22.01.2020ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ವಿಶೇಷ ಆಡಿಟ್ ವರದಿಯಲ್ಲಿ ನಮೂದಿಸಿರುವ ನ್ಯೂನ್ಯತೆಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸಮಗ್ರವಾದ ತನಿಖಾ ವರದಿಯನ್ನು ನೀಡುವಂತೆ ಆದೇಶ ಸಂಖ್ಯೆ: ಇಡಿ 90 ಯುಡಿವಿ 2018 ಬೆಂಗಳೂರು ದಿನಾಂಕ : 21.10.2023 ರಲ್ಲಿ ತನಿಖಾ ಸಮಿತಿಯನ್ನು ರಚಿಸಿರುವ ಬಗ್ಗೆ ಸಿಂಡಿಕೇಟಿನ ಗಮನಕ್ಕೆತರಲಾಯಿತು

ಕುಲಸಚಿವರು (ಪರೀಕ್ಷಾಂಗ) ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-

**ಕುಲಸಚಿವರು**

ಸಹಿ/-

**ಕುಲಪತಿಗಳು**